

ಮಗಳೊಟ್ಟಿಗೆ ಮಲಗಿದ ಸಾವಿತ್ರಿಗೂ ಮಗನ ಸಂಕಟ ಅರ್ಥವಾಗುತ್ತಿತ್ತು. ಮನೋಹರ ಮತ್ತು ಕವಿತಾ ಇಬ್ಬರೂ ಜೊತೆಯಾದರೆ ಹೇಗೆ? ಎನ್ನುವ ಹಂಬಲ ಬಹುದಿನಗಳಿಂದ ಅವಳ ಮನಸ್ಸಿನಲ್ಲಿತ್ತು. ತಾನು ಮಾಡುವ ಪಾರ್ಲರ್ ಕೆಲಸದ ನಡುವೆಯೂ ವಾರದಲ್ಲಿ ಎರಡು ದಿನವಾದರೂ ಮನೆಗೆ ಬಂದುಹೋಗುವ ಕವಿತಾ ಸಾವಿತ್ರಿಗೆ ಒಳ್ಳೇ ಹುಡುಗಿ ಅನ್ನಿಸಿಕೊಂಡಿದ್ದಳು. ಯಾವುದಕ್ಕೂ ನಸೀಬು ಬೇಕಲ್ಲ ಎಂದು ತನಗೆ ತಾನೇ ಸಮಾಧಾನಪಟ್ಟುಕೊಂಡಳು.

ನಿದ್ದೆಯಿಲ್ಲದೇ ಒದ್ದಾಡಿದ ಮನೋಹರ ಬೆಳಗು ಯಾವಾಗ ಆಗುತ್ತದೆಯೆಂದು ಕಾದವನಂತೆ ಎದ್ದು ಸ್ನಾನ ಮುಗಿಸಿ, 'ಅಮ್ಮಾ, ಒಂದು ಅರ್ಜೆಂಟ್ ಡೆಲಿವರಿ ಉಂಟು, ಹೋಗ್ತೆ' ಎಂದು ಅಂಗಡಿಗೆ ಬಂದಿದ್ದ; 'ಚಹಾನಾದ್ರೂ ಕುಡದು ಹೋಗೋ' ಎಂದು ಸಾವಿತ್ರಿ ಕರೆದರೂ ಕಿವಿಗೊಡದೇ.

ಒಂದಷ್ಟು ಹೊತ್ತು ಸುಮ್ಮನೆ ಕುಳಿತ ಮನೋಹರನ ಮನಸ್ಸು ಅಲ್ಲಿನ ತಂಪುಗಾಳಿಯಿಂದಲೋ, ಪ್ರಶಾಂತ ವಾತಾವರಣದಿಂದಲೋ ಪ್ರಫುಲ್ಲಿತವಾಗತೊಡಗಿತು. ಸಿಕ್ಕು ಸಿಕ್ಕಾಗಿ ಗಂಟುಹಾಕಿಕೊಂಡಿದ್ದ ಎಳೆಗಳೆಲ್ಲ ನಿಧಾನಕ್ಕೆ ಬಿಡಿಸಿಕೊಳ್ಳತೊಡಗಿದವು. ಮನೋಹರ ಹೆಚ್ಚು ಓದಿರದಿದ್ದರೂ, ಹೊರನೋಟಕ್ಕೆ ಬೌದ್ಧಿಕಶಕ್ತಿ ಇಲ್ಲದವನಂತೆ ಕಂಡರೂ ಅವನೊಳಗೆ ಸುತ್ತಲಿನದನ್ನ ಗ್ರಹಿಸುವ, ತನ್ನನ್ನು ತಾನು ವಿಮರ್ಶಿಸಿಕೊಳ್ಳುವ ಗುಣ ವರದಂತೆ ಅವನಿಗೊದಗಿತ್ತು. ವಾಸ್ತವ ಬದುಕಿನ ದುರ್ಬರತೆ, ವ್ಯಾವಹಾರಿಕ ಜಗತ್ತಿನ ಅನುಭವ ಅವನ ಒಳಬದುಕನ್ನು ಬೆಳೆಸಿತ್ತು. ಪ್ರಾಯಶಃ ಆ ಗುಣವೇ ಅವನನ್ನು ವಾಚಾಳಿಯಾಗದಂತೆ ತಡೆದು ಸ್ಥಿತಪ್ರಜ್ಞನಂತಾಗಿಸಿರಲೂ ಸಾಕು. ಒಂಟಿಬುರುಕ, ಗುಮ್ಮನಗುಸುಕ ಎಂದೆಲ್ಲ ಬಿರುದುಗಳು ಅವನ ಈ ಗುಣದಿಂದಾಗಿಯೇ ಬಂದಿರಬಹುದು.

ನಾನು ಕವಿತಾಳ ಮದುವೆ ವಿಷಯ ಕೇಳಿದ್ದೇ ಯಾಕೆ ಅಷ್ಟೊಂದು ಕುಸಿದುಹೋದೆ? ಎಂದು ಮನೋಹರ ತನ್ನನ್ನೇ ಪ್ರಶ್ನಿಸಿಕೊಂಡ. ಮನೋಹರನಿಗೆ ಕವಿತಾಳ ಬಗ್ಗೆ ಪ್ರೇಮವೆಂದು ಕರೆಯಲಾಗದ ಪ್ರೀತಿ ಹುಟ್ಟಿದ್ದು ಮೊದಲಿನಿಂದಲೇ. ಯಾವ ಮುಹೂರ್ತದಲ್ಲಿ ಆಕೆಯ ಬಗ್ಗೆ ಒಲವು ಹುಟ್ಟಿತೋ?